# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈವಿ:RC:2025-26/614 ದಿನಾಂಕ:16.06.2025

## ಸುತ್ತೋಲೆ

ವಿಷಯ:- ತುಮಕೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ ಅನುದಾನಿತ ಹಾಗೂ ಅನುದಾನರಹಿತ ಸ್ನಾತಕ ಪದವಿ ಕಾಲೇಜುಗಳಲ್ಲಿ ಯುವ ರೆಡ್‌ಕ್ರಾಸ್ ಘಟಕದ ಸ್ಥಾಪನೆ ಹಾಗೂ ವಿದ್ಯಾರ್ಥಿ ಸದಸ್ಯತ್ವ ಶುಲ್ಕವನ್ನು ಸಂದಾಯಿಸುವ ಕುರಿತು.

ಉಲ್ಲೇಖ:- 1. ಸಹಾಯಕ ಕಾರ್ಯದರ್ಶಿಗಳು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಬೆಂಗಳೂರು ಇವರ ಪತ್ರದ ಸಂಖ್ಯೆ:IRCS/ YRC/ SMF/ 576-605/ 2025-26 ದಿನಾಂಕ:28.05.2025.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:13.06.2025.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ /ಘಟಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಯಪಡಿಸುವುದೇನೆಂದರೆ, ಉಲ್ಲೇಖ (01)ರ ಪತ್ರದನ್ವಯ ತಮ್ಮ ಕಾಲೇಜಿನಲ್ಲಿ ಯುವ ರೆಡ್‌ಕ್ರಾಸ್ ಘಟಕವನ್ನು ಸ್ಥಾಪಿಸಿ, ಒಂದು ಬಾರಿ ರೂ.1500/- (ರೂಪಾಯಿ ಒಂದು ಸಾವಿರದ ಐದು ನೂರು ಮಾತ್ರ) ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ ಬೆಂಗಳೂರು ಇಲ್ಲಿಗೆ ಪಾವತಿಸಿ ನೊಂದಾಯಿಸಿಕೊಳ್ಳುವಂತೆ ತಿಳಿಸಲಾಗಿದೆ.

ಮುಂದುವರೆದಂತೆ, ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಯಿಂದ ಭಾರತೀಯ ರೆಡ್‌ಕ್ರಾಸ್ ಶುಲ್ಕವಾಗಿ ಸಂಗ್ರಹಿಸಿರುವ ಮೊತ್ತ ರೂ.50/-ಗಳಲ್ಲಿ, ರೂ.15/-ಗಳನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ ಬೆಂಗಳೂರು ಇವರಿಗೆ ಪಾವತಿಸಿ ಇನ್ನುಳಿದ ಮೊತ್ತ ರೂ.35/-ಗಳನ್ನು ಕಾಲೇಜಿನ ಹಂತದಲ್ಲಿ ಉಳಿಸಿಕೊಂಡು ಯುವ ರೆಡ್‌ಕ್ರಾಸ್ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಕ್ರಮವಹಿಸಲು ಉಲ್ಲೇಖ (02)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಈ ಮೂಲಕ ತಿಳಿಸಲಾಗಿದೆ.

<u>ಅಡಕ: ಉಲ್ಲೇಖ (01) ರ ಪತ್ರ</u>

ಆದೇಶದ ಮೇರೆಗೆ,

S. Srinivas

ಉಪಕುಲಸಚಿವರು

~~ಉಪಕುಲಸಚಿವರು~~

ಶೈಕ್ಷಣಿಕ ವಿಭಾಗ

ತುಮಕೂರು ವಿಶ್ವವಿದ್ಯಾನಿಲಯ

ತುಮಕೂರು

ಇವರಿಗೆ

ಎಲ್ಲಾ ಪ್ರಾಂಶುಪಾಲರು, ಸಂಯೋಜಿತ/ ಘಟಕ ಕಾಲೇಜುಗಳು ತುಮಕೂರು ವಿಶ್ವವಿದ್ಯಾನಿಲಯ ತುಮಕೂರು

ಪ್ರತಿಗಳು:

1. ಸಹಾಯಕ ಕಾರ್ಯದಶಿಗಳು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕರ್ನಾಟಕ #26 ರೆಡ್‌ಕ್ರಾಸ್ ಭವನ 1ನೇ ಹಂತ, ರೇಡ್ ಕೋರ್ಸ್ ರಸ್ತೆ ಬೆಂಗಳೂರು-560 001
2. ಹಣಕಾಸು ಅಧಿಕಾರಿಗಳು ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಕಛೇರಿ ಪ್ರತಿ.

THROUGH HUMANITY TO PEACE

ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ -38-

# Indian Red Cross Society

(CONSTITUTED UNDER PARLIAMENT ACT XV OF 1920)

KARNATAKA STATE BRANCH

100 years of minimizing, alleviating and preventing human suffering

Phone : 080-22264205, 22352127
Website : www.redcrosskarnataka.org
E-mail : ircskar@gmail.com, ircskarnataka@yahoo.in

No. IRCS / YRC/SMF/576-605/25-26
Date : 28/05/2025
Encl :

ಮಾನ್ಯ ಕುಲಸಚಿವರು
ತುಮಕೂರು ವಿಶ್ವವಿದ್ಯಾಲಯ
ಬಿ. ಹೆಚ್ ರಸ್ತೆ
ತುಮಕೂರು-572103

Manjunath
9/6

**ಸನ್ಮಾನ್ಯರಿಗೆ ಮಾಡುವ ನಮಸ್ಕಾರಗಳು,**

ವಿಷಯ: ಎಲ್ಲಾ ಸರ್ಕಾರಿ ಪ್ರಥಮದರ್ಜೆ, ಅನುದಾನಿತ ಮತ್ತು ಅನುದಾನರಹಿತ ಪದವಿ ಕಾಲೇಜುಗಳಲ್ಲಿ ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಿ, ವಿದ್ಯಾರ್ಥಿ ಸದಸ್ಯತ್ವ ಶುಲ್ಕ (ಪ್ರತಿ ವಿದ್ಯಾರ್ಥಿಯಿಂದ) ರೂ.15/- ಕಳುಹಿಸುವ ಬಗ್ಗೆ

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ- **ED/64/Vividha/2011, dated: 2/12/2011 & ED 38 Vividha 2016, dated: 17/06/2016.**

2. **ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ರವರ ಸುತ್ತೋಲೆ ಸಂಖ್ಯೆ:** ಕಾಶಿಇ/ಶೈವಿ/156/ರೆಡ್‌ಕ್ರಾಸ್/2024-25, ದಿನಾಂಕ-21.05.2025

*********************

ಮೇಲ್ಕಂಡ ಉಲ್ಲೇಖ (1) ಸರ್ಕಾರದ ಆದೇಶ ಮತ್ತು ಸುತ್ತೋಲೆಯಲ್ಲಿ ತಿಳಿಸಿರುವಂತೆ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳು ಯೂತ್ ರೆಡ್ ಕ್ರಾಸ್ ಘಟಕವನ್ನು ಸ್ಥಾಪಿಸಿ **ರೂ.1500/- (ಒಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ**) ಗಳನ್ನು ಒಂದು ಭಾರಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ ನೋಂದಾಯಿಸಿಕೋಳ್ಳುವಂತೆ ಮತ್ತು ಕಾಲೇಜಿನ ಪ್ರವೇಶಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ಕಾಲೇಜು ಶುಲ್ಕವನ್ನು ಸಂಗ್ರಹಿಸುವಾಗ ಯೂತ್ ರೆಡ್ ಕ್ರಾಸ್ ಘಟಕ ದಡಿಯಲ್ಲಿ ವಾರ್ಷಿಕವಾಗಿ ರೂ.50/- ಗಳನ್ನು ಸಂಗ್ರಹಿಸುವಂತೆಯು ಹಾಗೂ ಸಂಗ್ರಹಿಸಿದ ಶುಲ್ಕದಲ್ಲಿ 30% (ರೂ.15/-) ಅನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿಗೆ ಪಾವತಿಸಿ, ಉಳಿದ 70% (ರೂ.35/-) ಗಳನ್ನು ಕಾಲೇಜಿನ ಯುವ ರೆಡ್ ಕ್ರಾಸ್ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತೆ ಆದೇಶಿಸಲಾಗಿದೆ.

ಅದ್ದರಿಂದ ಇಲ್ಲಿಯವರೆವಿಗೂ ರೆಡ್ ಕ್ರಾಸ್ ಸಂಸ್ಥೆಗೆ ನೋಂದಣಿಯಾಗದೆ ಇರುವ ಕಾಲೇಜುಗಳಲ್ಲಿ ಕಡ್ಡಾಯವಾಗಿ ಯೂತ್ ರೆಡ್ ಕ್ರಾಸ್ ಘಟಕ ವನ್ನು ಸ್ಥಾಪಿಸಿ, ಈ ಪತ್ರದೊಂದಿಗೆ ಲಗತ್ತಿಸಿರುವ ನೋಂದಣಿ ಅರ್ಜಿಯಂತೆ ಭರ್ತಿ ಮಾಡಿ ನೋಂದಣಿ ಶುಲ್ಕ ರೂ.1,500/- ಗಳನ್ನು ಡಿಡಿ /ಚೆಕ್ ಮೂಲಕ ಪಾವತಿಸಿ ನೋಂದಾಯಿಸಿಕೊಳ್ಳುವಂತೆ ಹಾಗೂ ಈ ಹಿಂದಿನ ವರ್ಷಗಳಲ್ಲಿ ಅಂದರೆ, 2016-17, 2017-18, 2018-19, 2019-20, 2020-2021, 2021-22, 2022-23, 2023-24, 2024-25 ಶೈಕ್ಷಣಿಕ ವರ್ಷದ ಪ್ರತಿ ವಿದ್ಯಾರ್ಥಿಯಿಂದ 30% (ರೂ.15/-) ಗಳನ್ನು ಭಾರತೀಯ ರೆಡ್ ಕ್ರಾಸ್, ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆಗೆ ಪಾವತಿಸುವಂತೆ ತುಮಕೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಲು ಈ ಮೂಲಕ ಕೋರಿದೆ.

ಮುಂದುವರೆದು ಸದರಿ ಶುಲ್ಕವನ್ನು ಈ ಕೆಳಕಂಡ ವಿಳಾಸಕ್ಕೆ ಡಿಡಿ/ಚೆಕ್ ಮೂಲಕ ಪಾವತಿಸತಕ್ಕದ್ದು:

| DD/ CHEQUE SHOULD BE IN FAVOUR OF : | POSTAL ADDRESS:- |
|---|---|
| INDIAN RED CROSS SOCIETY - YOUTH RED CROSS | #26, RED CROSS BHAVAN,<br>1ST FLOOR, RACE COURSE ROAD, BENGALURU – 560001<br>Email :- yrckar@gmail.com,<br>PH :-080-22264205 |

**ಅಡಕ:** ಸರ್ಕಾರದ ಆದೇಶ, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ರವರ ಸುತ್ತೋಲೆ ಮತ್ತು ನೊಂದಣಿಯ ಅರ್ಜಿಯನ್ನು ತಮ್ಮ ಗಮನಕ್ಕಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಈ ಪತ್ರದೊಂದಿಗೆ ಲಗತ್ತಿಸಿದೆ.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ,**

ಉಮಾಕಾಂತ್
ಸಹಾಯಕ ಕಾರ್ಯದರ್ಶಿ

AC 365 6/6/25

ಸಂಖ್ಯೆ 948
ದಿನಾಂಕ 5/6/25